ಶ್ರೀ ಕೆ. ವಿ. ಶಂಕರಗೌಡ.—ಹೈಸ್ಕೂಲಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರ ಹಣ ಕೊಡಬೇಕಂದೇನೂ ಇಲ್ಲ. ಸಾಧ್ಯವಾದರೆ ಕೊಡಬಹುದು. ಪ್ರೈಮರಿ ಶಾಲೆಗಳಿಗೆ ತಾಲ್ಲೂಕು ಬೋರ್ಡ್ ಮತ್ತು ಸ್ಥಳದವರೂ ಸೇರಿ ಸಹಾಯ ಮಾಡಬೇಕು. ಸರಕಾರ ಒಂದು ಸಾವಿರ ರೂಪಾಯಿ ಕೊಡುವುದು, ತಾಲ್ಲೂಕು ಬೋರ್ಡಿನವರು ಅರ್ಧ, ಸ್ಥಳದವರು ಅರ್ಧ ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುನ್ಸೀಫ್ ಕೋರ್ಟ್ ಕಟ್ಟಡ ಬಿಡಿಸಿಕೊಟ್ಟರೆ ಹೆಣ್ಣು ಮಕ್ಕಳ ಶಾಲೆಗೆ ಅಲ್ಲೇನೋ ಅನುಕೂಲವಾಗಿದ್ದರೂ ಶಾಲೆಗೆ ಬೇಕಾದ ಕಟ್ಟಡ ಸೌಲಭ್ಯ ಸಿಕ್ಕುವುದಿಲ್ಲವೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅದು ಸಾಲದಿರಬಹುದು. ತಾತ್ಕಾಲಿಕವಾಗಿ ಪರಿಹಾರ ನೀಡಲು ಹಾಗೇನಾದರೂ ಮಾಡಬೇಕಾಗುವುದು.

## Facilities in the existing General Hostels

172. Sri P. ANJANAPPA (Pavagada).—

Will the Minister for Agriculture and Education be pleased to state :—

(*a*) whether they would provide facilities such as books, clothes, boarding and lodging, etc., in the existing general hostels in the State, free of cost for the students of Nursery to High School ;

(*b*) whether they propose to increase the present strength of the hostels ?

*A*.—Sri K. V. SHANKARA GOWDA (Minister for Agriculture and Education).—

(*a*) No.

(*b*) There is no limit for admission to General Hostels.

ಶ್ರೀ ಪಿ. ಆಂಜನಪ್ಪ.—ಈಗ ತುಮಕೂರು ಸರಕಾರಿ ಕಾಲೇಜಿನ ಹಾಸ್ಟಲಿನಲ್ಲಿ ಈ ತೀರಗಳು ಅಂದರೆ, ಮಾರ್ಚ್ ಒಂದನೆಯ ತಾರೀಖಿನಿಂದ ಊಟ ಕೊಡುವುದನ್ನು ನಿಲ್ಲಿಸಿರುವುದರಿಂದ ಈಗ ಪರೀಕ್ಷೆಯ ಕಾಲವಾದ್ದರಿಂದ ದಯೆಯಿಟ್ಟು ಊಟಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಜನರಲ್ ಹಾಸ್ಟಲುಗಳಲ್ಲಿ ಊಟ ನಿಲ್ಲಿಸಿದರೆ ಸರಕಾರವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ರಾಜ್ಯದಲ್ಲಿರುವ ನಿಮ್ನವರ್ಗದ ವಿದ್ಯಾರ್ಥಿಗಳಿಗಾದರೂ ಉಚಿತವಾಗಿ ಪುಸ್ತಕ, ಬಟ್ಟೆ, ಊಟ, ವಸತಿ ಮುಂತಾದುವುಗಳನ್ನು ಒದಗಿಸಿದ್ದೀರಾ ? ಇಲ್ಲದಿದ್ದರೆ ಮುಂದಾದರೂ ಒದಗಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ನಿಮ್ನವರ್ಗದ ಹಾಸ್ಟಲುಗಳಿಗೆ ಸಹಾಯ ಧನವಿದೆ. ಇದು ಜನರಲ್ ಹಾಸ್ಟಲಿನ ವಿಚಾರ. ತಾವು ಕೇಳಿರುವ ಉತ್ತರ ಬೇಕಾದರೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಎಸ್. ಎಸ್. ಅರಕೇರಿ.—ಜನರಲ್ ಹಾಸ್ಟೆಲುಗಳಿಗೆ ಸರ್ಕಾರದಿಂದ ಏನಾದರೂ ಧನ ಸಹಾಯ ಇದೆಯೇ ! ಇದ್ದರೆ ಎಷ್ಟು ಪರ್ಸೆಂಟು ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ನೌಕರರು ಏನಿರುತ್ತಾರೋ ಅವರ ಸಂಬಳ ಎಷ್ಟಿದೆ ಅದನ್ನು ಕೊಡಲಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸಾರ್ವಜನಿಕ ವಿದ್ಯಾರ್ಥಿ ನಿಲಯ ಎನ್ನುವ ಮಾತಿನ ಪಾವಿತ್ರತೆಯನ್ನು ಈಗಿನ ಕಾಲದಲ್ಲಿ ಒಕ್ಕಲಿಗ ಸಾರ್ವಜನಿಕ ವಿದ್ಯಾರ್ಥಿನಿಲಯ, ಲಿಂಗಾಯತ ಸಾರ್ವಜನಿಕ ವಿದ್ಯಾರ್ಥಿನಿಲಯ, ಹರಿಜನ ಸಾರ್ವಜನಿಕ ವಿದ್ಯಾರ್ಥಿನಿಲಯ ಅನ್ನತಕ್ಕ ಒಂದು ಕೋಮುವಾರು ಹದವನ್ನು ಉಪಯೋಗಿಸುವುದನ್ನು ರದ್ದು ಮಾಡಿ. ಆ ರೀತಿ ಮಾಡದಿದ್ದರೆ ಅಂಥವರಿಗೆ ಗ್ರಾಂಟು ನಿಲ್ಲಿಸುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು, ಇದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎರ್. ನಾರಾಯಣಸ್ವಾಮಿ.—ಜನರರ್ ಹಾಸ್ಟೆಲಿನಲ್ಲಿ ಈಗಿನ ಪದ್ಧತಿ ಪ್ರಕಾರ ನಿಮ್ಮವರ್ಗದವರಿಗೂ ಅವಕಾಶವಿದೆಯಲ್ಲವೇ? ಇದ್ದಮೇಲೆ ಅವರಿಗೆ ಉಚಿತ ಸೌಕರ್ಯವನ್ನು ಏಕೆ ಕೊಡಿಸುವುದಿಲ್ಲ?

ಶ್ರೀ ಕೆ. ವಿ. ಶಂಕರಗೌಡ.—ಜನರರ್ ಹಾಸ್ಟೆಲುಗಳಿಗೆ ಸೇರತಕ್ಕ ನಿಮ್ಮವರ್ಗದ ವಿದ್ಯಾರ್ಥಿಗಳಿಗೆ ಈ ಸೌಕರ್ಯ ಕೊಡರಾಗುವುದಿಲ್ಲ, ಸ್ಕಾಲರ್‌ಷಿಪ್ ಕೊಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಸಂಸ್ಥಾನಾಮಳಿ ಜನರರ್ ಹಾಸ್ಟೆಲ್‌ಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಎಷ್ಟು ಜನಕ್ಕೆ ಗ್ರಾಂಟ್ ಕೊಡುವುದಕ್ಕೆ ಪ್ರೊವಿಜನ್ ಮಾಡಿದ್ದೀರಿ?

ಶ್ರೀ ಕೆ. ವಿ. ಶಂಕರಗೌಡ.—ವಿದ್ಯಾರ್ಥಿಗಳಿಗೆ ಗ್ರಾಂಟ್ ಕೊಡುವುದಿಲ್ಲ, ಹಾಸ್ಟೆಲುಗಳಿಗೆ ಅಲ್ಲ ಕೆಲಸ ಮಾಡತಕ್ಕ ನೌಕರರ ಸಂಬಳವನ್ನು ಕೊಡರಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಜನರರ್ ಹಾಸ್ಟೆರ್‌ನಲ್ಲಿ ಅವಕಾಶ ಇಲ್ಲ ಎಂದು ಹೇಳಿದಿರಿ, ಸೋಷಿಯಲ್ ವೆರ್‌ಫೇರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂತೆ ಷೆಡ್ಯೂರ್ಡ್ ಕ್ಯಾಸ್ಟ್ಸ್‌ನವರು ಯಾರಾದರೂ ಸೇರಿದ್ದರೆ ಅಲ್ಲಿನ ಗ್ರಾಂಟ್‌ನಿಂದ ಅವರಿಗೆ ಅಡ್‌ಜಸ್ಟ್ ಮಾಡಿಕೊಟ್ಟು ಸಹಾಯ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಒಳ್ಳೆಯ ಸಲಹೆ, ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾರ್ವಜನಿಕ ವಿದ್ಯಾರ್ಥಿನಿಲಯ ಕಟ್ಟಡಗಳಿಗೆ ಸರ್ಕಾರದವರು ಅಷ್ಟು ಭಾಗದ ಹಣ ಕೊಡಬೇಕೆಂಬ ಪದ್ಧತಿ ಹಿಂದೆ ಇತ್ತು, ಈ ಮಧ್ಯೆ ಆ ಪದ್ಧತಿಯನ್ನು ನಿಲ್ಲಿಸಿದ್ದಾರೆ. ಈಗ ಅದೇ ಪದ್ಧತಿಯೇನ್ನು ಅನುಸರಿಸಿ ಮುಕ್ಕಾಲು ಭಾಗದ ಹಣವನ್ನು ಈ ಕಟ್ಟಡಗಳಿಗೆ ಕೊಡುವುದನ್ನು ಪುನಃ ಆಲೋಚನೆ ಮಾಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಅದು ಈಗಲೂ ಜಾರಿಯಲ್ಲಿದೆ. ಮಧ್ಯೆ ನಿಂತಿತ್ತು. ಪುನಃ ಜಾರಿಯಲ್ಲಿದೆ. ನೂರಕ್ಕೆ ಐವತ್ತು ಪರ್ಸೆಂಟು ಸರ್ಕಾರದವರು ಕೊಡುತ್ತಾರೆ. ಆದರೆ ಯಾವ ಸಂದರ್ಭದಲ್ಲೂ ಕೂಡ ಒಂದು ಲಕ್ಷದ ಮೇಲೆ ಹೋಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶವನ್ನು ಕೊಡುವಾಗ ಶೇಕಡ ಹತ್ತು ಭಾಗ ಬೇರೆ ಬೇರೆ ಜನಾಂಗದವರನ್ನು ಸೇರಿಸಬೇಕು, ನಿಮ್ಮವರ್ಗದವರನ್ನೂ ಸೇರಿಸಬೇಕೆಂಬ ನಿಯಮ ಇದೆ. ಇದು ಎಲ್ಲಾ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಲ್ಲೂ ಇದೆಯಲ್ಲವೇ? ಈ ಷರತ್ತನ್ನು ಅನುಸರಿಸಿದ್ದಾರೆಯೇ?

ಶ್ರೀ ಕೆ. ವಿ. ಶಂಕರಗೌಡ.—ಅದು ಬೇರೆ ಪ್ರಶ್ನೆ ಆಗುತ್ತದೆ.

ಶ್ರೀ ಸಿದ್ಧಯ್ಯ ಕಾತೀಮಠ.—ಜನರರ್ ಹಾಸ್ಟೆಲುಗಳಿಗೆ ಗ್ರಾಂಟ್ ಕೊಡುವಾಗ ತಾವು ಯಾವ ಅಂಶ ಗಮನಕ್ಕೆ ತಗೆದುಕೊಳ್ಳುತ್ತೀರಿ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ನೌಕರರು ಎಷ್ಟು ಜನ ಇದ್ದಾರೆ ಅವರಿಗೆ ಸಂಬಳವನ್ನು ಕೊಡುತ್ತೇವೆ ಅಷ್ಟೆ. ಎಲ್ಲಾ ಕೋಮುಗಳಿಗೂ ಪ್ರವೇಶಕ್ಕೆ ಅವಕಾಶ ಇರಬೇಕು, ಆ ರೀತಿ ಇದ್ದರೆ ಅಲ್ಲ ನೌಕರರ ಸಂಖ್ಯೆ ಎಷ್ಟು ಜನ ಇದ್ದಾರೆ ಅವರ ಸಂಬಳವನ್ನು ಗ್ರಾಂಟಾಗಿ ಕೊಡುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಷೆಡ್ಯೂರ್ಡ್ ಕ್ಯಾಸ್ಟ್ಸ್‌ನ ವಿದ್ಯಾರ್ಥಿಗಳಿಗೆ ಸಹಾಯ ಕೊಡದೆ ಜಾತೀಯತೆಯ ಹಾಸ್ಟೆಲುಗಳನ್ನು ಮಾಡುತ್ತಾ ಇದ್ದೀರಲ್ಲಾ ಇದರ ವಿಷಯ ಏನು ಹೇಳಿ.

ಶ್ರೀ ಕೆ. ವಿ. ಶಂಕರಗೌಡ.—ಜಾತೀಯತೆ ಹೋಗಬೇಕೆಂದು ಇದೆ, ಆದರೆ ನಮ್ಮ ಹೃದಯದಲ್ಲಿ ಇನ್ನೂ ಜಾತಿ ಇದೆ ಅಂತ ಹೇಳುತ್ತಾ ಇದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ವರ್ಷ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಿಗೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಗ್ರಾಂಟು ಕೊಟ್ಟಿದ್ದೀರಿ ?

Sri K. V. SHANKARA GOWDA.—This is a general question which I cannot answer. If questions arising out of this question are asked, I will be able to answer.

## Nationalisation of State Transport Bus Routes

173. Sri H. C. LINGA REDDY (Malur).—

Will the Minister for Transport and Tourism be pleased to state :—

(*a*) the extent to which the State Transport Bus routes have been nationalised so far ;

(*b*) the profits or losses so far incurred under this scheme ;

(*c*) the stage at which the scheme of nationalisation stands at present in several districts ;

(*d*) whether the scheme would be extended to ten remaining areas and if so, when the entire State would be covered ?

*A*.—Sri MOHAMED ALI (Minister for Transport and Tourism).—

(*a*) The bus routes covered by the following schemes have so far been nationalised, namely :—

| | | | |
|---|---|---|---|
| 1. | Anekal Pocket ... | 14 | routes |
| 2. | Bangalore Scheme ... | 94 | ,, |
| 3. | Hassan Scheme ... | 98 | ,, |
| 4. | Mysore Scheme ... | 64 | ,, |
| 5. | Hubli Scheme ... | 170 | ,, |
| 6. | Bijapur Scheme (including the routes operated by North Kanara Division)... | 173 | ,, |
| 7. | Belgaum Scheme ... | 175 | ,, |
| 8. | Gulbarga Scheme .. | 71 | ,, |
| 9. | Bellary Scheme ... | 86 | ,, |
| 10. | Kanakapur Pocket ... | 29 | ,, |
| 11. | Gulbarga-Sedam ... | 1 | ,, |
| 12. | Bangalore City Tranport Services. | | |
| 13. | Hubli City Services. | | |

(*b*) The Mysore State Road Transport Corporation are operating services also on routes other than those referred to above. It is not possible to give information regarding profits or lasses on account of the schemes referred to abovo only, as no separate accounts are maintained. However, the profits made by the Corporation for the last three years are given below :—

| | Rs. |
|---|---|
| 1964–65 | 62,48,659 |
| 1965–66 | 71,27,423 |
| 1966–67 | 40,47,006 |